ಇದರ ಜೊತೆಗೆ ನಿಮ್ಮ ನೀತಿ ಅಂದರೆ ಪಾನನಿರೋಧವನ್ನು ಜಾರಿಗೆ ತರತಕ್ಕ ನೀತಿ ಸರ್ಕಾರಾಕ್ಕೆ ಇದೆಯೇ? ಇಲ್ಲಿ ಮಹಾತ್ಮನ ಫೋಟೋ ಇಟ್ಟುಕೊಂಡಿದ್ದೇವೆ. ನಿಮ್ಮ ಸರ್ಕಾರದ ನೀತಿ, ಪಾನನಿರೋಧವನ್ನು ಜಾರಿಗೆ ತರತಕ್ಕ ಕ್ರಮ ಇದೆಯೇ, ಇದನ್ನು ಸ್ವಲ್ಪ ಹೇಳಬೇಕು.

ಶ್ರೀ- ಎಂ. ವೀರಪ್ಪ ಮೊಯ್ಲಿ : ಪಾನನಿರೋಧದ ಬಗ್ಗೆ ಪಾನನಿರೋಧದ ಬಗ್ಗೆ ಈಗಿರತಕ್ಕ ನೀತಿ ತಮಗೂ ಗೊತ್ತಿದೆ, ನಮಗೂ ಗೊತ್ತಿದೆ. ಇನ್ನು ಮುಂದೆ ಏನು ನೀತಿ ಮಾಡುತ್ತೇವೆ, ತಾವು ಏನಾದರೂ ಸೂಚನೆ ಕೊಟ್ಟರೆ, ತಮ್ಮ ಸಲಹೆ ತೆಗೆದುಕೊಂಡು, ಅದನ್ನು ಗ್ರಹಿಸಿ, ಏನು ಮಾಡಬೇಕೆಂದು ಮುಂದಿನ ಹೆಜ್ಜೆ ಇಡುತ್ತೇವೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ - ನೀರಾವರಿ ಕಾಮಗಾರಿ.

761 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91, 1991-92 ಮತ್ತು 1992-93ರಲ್ಲಿ ಇದುವರೆವಿಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳಿಗೆ ಖರ್ಚು ಮಾಡಿದ ಒಟ್ಟು ಮೊಬಲಗು ಎಷ್ಟು?

ಆ) ಇದರಲ್ಲಿ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿರುವ ಮೊಬಲಗು ಎಷ್ಟು? (ವರ್ಷವಾರು ವಿವರಗಳನ್ನು ಕೊಡುವುದು)

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ವಿವರಗಳು ಕೆಳಕಂಡಂತೆ ಇರುತ್ತದೆ.

ವರ್ಷ	ಲಕ್ಷ ರೂ.ಗಳಲ್ಲಿ
1990-91	315.608
1991-92	324.607
1992-93 (ನವೆಂಬರ್ 92ರ ಅಂತ್ಯದ ವರೆವಿಗೆ)	347.505

ಆ)

ವರ್ಷ	ಖರ್ಚು ಮಾಡಿದ ಹಣ ಲಕ್ಷ ರೂ.ಗಳಲ್ಲಿ
1990-91	51.228
1991-92	57.452
1992-93 (ನವೆಂಬರ್ 1992ರ ಅಂತ್ಯದ ವರೆಗೆ)	21.279

ಶ್ರೀ ಸಾದತ್ ಅಲಿ ಖಾನ್ ; ಮಾನ್ಯ ಉಪಾಧ್ಯಕ್ಷರೇ, ಮೈನರ್ ಇರಿಗೇಷನ್ ಗೆ ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್‌ನಲ್ಲಿ, 1990-91ರಲ್ಲಿ 315.608ಲಕ್ಷ, 1991-92ನೇ ಇಸವಿಗೆ 324.607 ಲಕ್ಷ, 1992-93ಕ್ಕೆ 347.500 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

ತಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ 1990-93ನೇ 51.228 ಲಕ್ಷ, 1991-92ಕ್ಕೆ 57.452 ಲಕ್ಷ ಖರ್ಚಾಗಿದೆ. 1992-93ಕ್ಕೆ ಇಡೀ ಡಿಸ್ಟ್ರಿಕ್ಟ್‌ನಲ್ಲಿ 347.50 ಲಕ್ಷ ಖರ್ಚಾಗಿದೆ. ಅದರಲ್ಲಿ ನಮ್ಮ ತಾಲ್ಲೂಕಿಗೆ 21 ಲಕ್ಷದ 27 ಸಾವಿರದ 900 ರೂಪಾಯಿಗಳು ಖರ್ಚಾಗಿದೆ. ಆದ್ದರಿಂದ ಹೀಗಾಗಿ ನಮ್ಮ ತಾಲ್ಲೂಕಿಗೆ ಅನ್ಯಾಯ ಆಗಿದೆ. ಒಂಭತ್ತು ತಿಂಗಳಲ್ಲಿ 36 ಲಕ್ಷರೂಪಾಯಿಗಳನ್ನು ಈ ಮೈನರ್ ಇರಿಗೇಷನ್ ಬಾಬತ್ತಿನಲ್ಲಿ ಕಡಿಮೆ ಕೊಟ್ಟಿದ್ದಾರೆ. ಇದನ್ನು ಸರಿಪಡಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಚನ್ನಪಟ್ಟಣ ತಾಲ್ಲೂಕಿನಲ್ಲಿ ಏನು ಸಣ್ಣ ನೀರಾವರಿ ಕಾಮಗಾರಿಗಳು ಇವೆ, ಅವುಗಳ ಬಗ್ಗೆ ನಾನು ವಿಮರ್ಶೆ ಮಾಡಿ ಅಲ್ಲಿಗೆ ಏನಾದರೂ ಕಡಿಮೆ ಹಣ ಕೊಟ್ಟಿದ್ದರೆ ಇದೇ ಮಾರ್ಚಿ ಒಳಗಾಗಿ ಜಾಸ್ತಿ ಹಣ ಕೊಡಿಸುತ್ತೇನೆ. ಮುತ್ತೆ ಮುಂದೆ ಬರತಕ್ಕ ಹಣಕಾಸಿನ ವರ್ಷದಲ್ಲಿ ಕೂಡ ಯಾವ ಯಾವ ಮೈನರ್ ಇರಿಗೇಷನ್ ವರ್ಕ್ಸ್ ಇವೆ ಅದರಲ್ಲಿ ತಮ್ಮ ತಾಲ್ಲೂಕಿಗೆ ಏನೂ ಅನ್ಯಾಯ ಆಗದ ಹಾಗೆ ಸರಿಸಮಾನವಾಗಿ ಎಲ್ಲರಿಗೂ ಕೊಡತಕ್ಕಂಥ ರೀತಿಯಲ್ಲಿ ತಮಗೂ ಕೊಡುತ್ತೇನೆ.

ಶ್ರೀ ಸಾದತ್ ಅಲಿ ಖಾನ್ : 1992-93ನೇ ಸಾಲಿನಲ್ಲಿ ಈಗಾಗಲೇ 37 ಲಕ್ಷ ರೂಪಾಯಿಗಳನ್ನು ಕಡಿಮೆ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಜಾಸ್ತಿ ಮಾಡೋಣ.

ಉಪಾಧ್ಯಕ್ಷಣಿಯವರು : ಜಾಸ್ತಿ ಮಾಡಿಕೊಡುತ್ತೇವೆಂದು ಹೇಳಿದ್ದಾರೆ.

ಕುಖ್ಯಾತ ಕಾಡಿನ ಕಳ್ಳ ವೀರಪ್ಪನ್ ಬಂಧನ.

99 - ಶ್ರೀ ಬಸವರಾಜರಾಯರೆಡ್ಡಿ (ಯಲ್ಬುರ್ಗಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಖ್ಯಾತ ಕಾಡಿನ ಕಳ್ಳ ವೀರಪ್ಪನ್‌ನನ್ನು ಬಂಧಿಸಲು ಸರ್ಕಾರವು ವಿಫಲವಾಗಿದೆ, ಎಂದು ಜನತೆಯ ಕೂಗು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಇದಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು? ಹಾಗೂ ಈವರೆಗೆ ತೆಗೆದುಕೊಂಡು ಕ್ರಮಗಳೇನು?

ಇ) ವೀರಪ್ಪನ್‌ನನ್ನು ಹಿಡಿಯಲು ಇದುವರೆವಿಗೂ ವೆಚ್ಚ ಮಾಡಿರುವ ಹಣ ಎಷ್ಟು (ಸಂಬಂಧಿಸಿದ ಎಲ್ಲಾ ಇಲಾಖೆಗಳಿಂದ, ಹಾಗೂ ಎಷ್ಟು ಜನ ಅಧಿಕಾರಿಗಳು ಮತ್ತು ಸಾರ್ವಜನಿಕರು ಸಾವನ್ನಪ್ಪಿದ್ದಾರೆ.

ಈ) ವೀರಪ್ಪನ್‌ನನ್ನು ಹಿಡಿಯಲು ದೃಢಸಂಕಲ್ಪ ಸರ್ಕಾರಕ್ಕೆ ಇದ್ದಲ್ಲಿ ಯಾವ ದಿನಾಂಕದ ಒಳಗಾಗಿ ಅಪರಾಧಿಯನ್ನು ಹಿಡಿಯಲಾಗುವುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ. ವೀರಪ್ಪನ್‌ನ್ನು ಹಿಡಿಯಲು ಸರ್ಕಾರ ಎಲ್ಲ ರೀತಿಯ ಪ್ರಯತ್ನವನ್ನು ಮಾಡುತ್ತಿದೆ. ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಹುದ್ದೆಯ ಅಧಿಕಾರಿಯ ನೇತೃತ್ವದಲ್ಲಿ ಪೊಲೀಸ್ ಮತ್ತು ಅರಣ್ಯ ಅಧಿಕಾರಿಗಳನ್ನು ಹೊಂದಿರುವ ಟಾಸ್ಕ್-ಫೋರ್ಸ್‌ನ್ನು ಸರ್ಕಾರವು ರಚಿಸಿದೆ.